OS No.77/2024.

PW2.

**ಸಾಕ್ಷಿಯನ್ನು ದಿನಾಂಕಃ 20-11-2025 ರಂದು ಕರೆದು ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲು ಃ- ಪ್ರತಿವಾದಿ ನಂ.3 ರವರ ಶ್ರೀಬಿ.ಆರ್.ಡಿ ವಕೀಲರಿಂದ.**

ನಾನು ಪಿ.ಯು.ಸಿ ವರೆಗೆ ಓದಿರುತ್ತೇನೆ. ದಾವಾ ಆಸ್ತಿಗಳ ಪಹಣಿ ಪತ್ರಿಕೆಗಳನ್ನು ನಾನು ನೋಡಿರುತ್ತೇನೆ. ವೆಂಕಪ್ಪ ಇವರಿಗೆ ವಾದಿ ನಂ.2 ಹೆಂಡತಿ, ವಾದಿ ನಂ.1 ಮತ್ತು ಪ್ರತಿವಾದಿ ನಂ.1 ಮಕ್ಕಳು ಆಗಬೇಕು ಎಂದರೆ ಸರಿ. ದಾವಾ ಆಸ್ತಿಗಳ ಸಮೀಪದಲ್ಲಿ ನನಗೆ ಸೇರಿದ ಜಮೀನ ರಿ.ಸ. ನಂ.9 ಇರುತ್ತದೆ. ದಾವಾ ಆಸ್ತಿಗಳು ಒಂದಕ್ಕೊಂದು ಹತ್ತಿಕೊಂಡು ಇರುತ್ತವೆ. ದಾವಾ ಆಸ್ತಿಗಳ ಪೂರ್ವಕ್ಕೆ ಹಳ್ಳ, ಪಶ್ಚಿಮಕ್ಕೆ ವೆಂಕನಗೌಡ ಪಾಟೀಲ ಇವರ ಜಮೀನು, ಉತ್ತರಕ್ಕೆ ರಸ್ತೆ ಮತ್ತು ದಕ್ಷಿಣಕ್ಕೆ ಮಹಾಲಿಂಗಪ್ಪ ಕಟ್ಟಿಮನಿ, ರಾಮಣ್ಣ ಕಟ್ಟಿಮನಿ ಇವರ ಜಮೀನುಗಳು ಇರುತ್ತವೆ.

ವೆಂಕಪ್ಪ ಇವರು ತೀರಿಕೊಂಡ ನಂತರ ವಾದಿಯರ ಮತ್ತು ಪ್ರತಿವಾದಿ ನಂ.1 ರವರ ಹೆಸರುಗಳ ದಾವಾ ಆಸ್ತಿಗಳ ಕಂದಾಯ ದಾಖಲೆಗಳಲ್ಲಿ ದಾಖಲಾಗಿದ್ದವು. ದಾವಾ ಆಸ್ತಿಗಳಿಗೆ ಸಂಬಂದಿಸಿದಂತೆ ವಾದಿಯರ ಮತ್ತು ಪ್ರತಿವಾದಿ ನಂ.1 ರವರ ನಡುವೆ ಆದ ವಾಟ್ನಿ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಎಂದರೆ ಸಾಕ್ಷಿಯು ಅವರ ನಡುವೆ ಯಾವುದೇ ವಾಟ್ನಿ ಆಗಿರುವುದಿಲ್ಲ ಎಂದು ನುಡಿಯುತ್ತಾರೆ.

ವಾದಿಯರು ಈ ದಾವೆಯನ್ನು ಪಾಲು ಕೇಳಿ ಹಾಕಿರುತ್ತಾರೆ. ಪ್ರತಿವಾದಿ ನಂ.3 ರವರನ್ನು ಈ ದಾವೆಯಲ್ಲಿ ವಾದಿಯರು ಏಕೆ ಪಕ್ಷಗಾರರನ್ನಾಗಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾನು ಈ ದಾವೆಯಲ್ಲಿ ಸಾಕ್ಷ ಪ್ರಮಾಣ ಪತ್ರ ದಾಖಲ ಮಾಡುವುದಕ್ಕಿಂತ ಮುಂಚೆ ದಾವಾ ಆಸ್ತಿ ರಿ.ಸ.ನಂ.4/1 ರ

ಪಹಣಿ ಪತ್ರಿಕೆಯನ್ನು ನೋಡಿರುವುದಿಲ್ಲ, ಆದ್ದರಿಂದ ಅದರಲ್ಲಿ ಯಾರ ಹೆಸರು ನಮೂದು ಇರುತ್ತದೆ ಎಂದು ನನಗೆ ಮಾಹಿತಿ ಇರುವುದಿಲ್ಲ. ವೆಂಕಪ್ಪ ಇವರು ತೀರಿಕೊಂಡ ನಂತರ ವಾದಿಯರ ಮತ್ತು ಪ್ರತಿವಾದಿ ನಂ.1 ರವರ ನಡುವೆ ಅವರ ಮನೆತನದ ಆಸ್ತಿಗಳಿಗೆ ಸಂಬಂಧಿಸಿದಂತೆ ವಾಟ್ನಿ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಾಟ್ನಿಯಲ್ಲಿ ದಾವಾ ಆಸ್ತಿ ರಿ.ಸ.ನಂ.4/1 ಇದು ಪ್ರತಿವಾದಿ ನಂ.1 ರವರ ಪಾಲಿಗೆ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ ನಂ.1 ರವರ ತಮ್ಮ ಮನೆತನದ ಅಡಚಣೆ ಸಲುವಾಗಿ ದಾವಾ ಆಸ್ತಿ ರಿ.ಸ.ನಂ.4/1 ನ್ನು ಪ್ರತಿವಾದಿ ನಂ.3 ರವರಿಗೆ ದಿನಾಂಕ 08-08-2018 ರಂದು ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಮಾಹಿತಿ ಇರುವುದಿಲ್ಲ. ಸದರಿ ಎಲ್ಲ ವಿಷಯಗಳು ನನಗೆ ಮಾಹಿತಿ ಇದ್ದರೂ ಸಹಿತ ನಾನು ನ್ಯಾಯಾಲಯದ ಮುಂದೆ ನಿಜ ಸಂಗತಿಗಳನ್ನು ಹೇಳುತ್ತಿಲ್ಲ ಎಂದರೆ ಸರಿಯಲ್ಲ.

ವಾದಿಯರಿಗೆ ಮತ್ತು ಪ್ರತಿವಾದಿ ನಂ.1 ರವರಿಗೆ ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ ಜಗಳ ಮಾರ್ಚ-2024 ನೇ ಸಾಲಿನಲ್ಲಿ ಬಂದಿರುತ್ತದೆ ಎಂದರೆ ಸರಿ. ಸದರಿ ದಿನಾಂಕಕ್ಕಿಂತ ಮೊದಲು ವಾದಿಯರ ಮತ್ತು ಪ್ರತಿವಾದಿ ನಂ.1 ರವರ ನಡುವೆ ಯಾವುದೇ ವಾಟ್ನಿ ಆಗಿರುವುದಿಲ್ಲ. ಪ್ರತಿವಾದಿ ನಂ.1 ರವರ ಹೆಸರು ಮಾತ್ರ ದಾವಾ ಆಸ್ತಿ ರಿ.ಸ.ನಂ.4/1 ಕ್ಕೆ ಹೇಗೆ ದಾಖಲಾಯಿತು ಎಂದು ನನಗೆ ಹೇಳಲು ಬರುವುದಿಲ್ಲ. 2017 ನೇ ಸಾಲಿನಲ್ಲಿ ಆದ ವಾಟ್ನಿ ಪ್ರಕಾರ ಡ ನಂಬರ ಎಮ್.ಆರ್.ಎಚ್-6/2017-18 ರ ಪ್ರಕಾರ ಪ್ರತಿವಾದಿ ನಂ.1 ರವರ ಹೆಸರು ರಿ.ಸ.ನಂ 4/1 ಕ್ಕೆ ದಾಖಲಾಯಿತು ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ ನಂ.3 ಇವರು ಸದರಿ ರಿಸ ನಂ.4/1 ಕ್ಕೆ ಸಂಬಂಧಿಸಿದಂತೆ ಸಂಪೂರ್ಣವಾಗಿ ವಿಚಾರಣೆ ಮಾಡಿ ತದನಂತರ ಪ್ರತಿವಾದಿ ನಂ.1 ರವರ ಕಡೆಯಿಂದ ದಿನಾಂಕ 08-08-2018 ರಂದು ಖರೀದಿ ಮಾಡಿರುತ್ತಾನೆ ಎಂದರೆ ಸಾಕ್ಷಿಯು ಖರೀದಿ ಮಾಡಿರುವ ವಿಷಯ ನನಗೆ ಮಾಹಿತಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಖರೀದಿ ಪತ್ರದ ಪ್ರಕಾರ ಪ್ರತಿವಾದಿ ನಂ.3 ರವರ ಹೆಸರು ಖರೀದಿ ಮಾಡಿದ ಆಸ್ತಿಯ ಪಹಣಿ ಪತ್ರಿಕೆಯಲ್ಲಿ ದಾಖಲಾಯಿತು ಎಂದರೆ ನನಗೆ ಮಾಹಿತಿ ಇರುವುದಿಲ್ಲ.

ನನ್ನ ಸಾಕ್ಷ ಪ್ರಮಾಣ ಪತ್ರವನ್ನು ಬರೆಯಲು ನಾನೇ ಮಾಹಿತಿಯನ್ನು ನೀಡಿರುತ್ತೇನೆ. ನನಗೆ ದಾವಾ ಆಸ್ತಿಗಳ ಬಗ್ಗೆ ಎಲ್ಲ ಸಂಗತಿಗಳ ಬಗೆ ಮಾಹಿತಿ ಇದ್ದರೂ ಸಹಿತ ವಾದಿಯರ ಮಾತು ಕೇಳಿಕೊಂಡು ಸುಳ್ಳು ಸಾಕ್ಷವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು )

ಓ ಹೇ ಕೇ ಸರಿ ಇದೆ.

Sd/-
ಪ್ರಧಾನ ದಿವಾಣಿ ನ್ಯಾಯಾಧೀಶರು
ಮುಧೋಳ.

**ಸಾಕ್ಷಿಯ ಸಹಿಃ**

LAGAMA SHIVANAPPA HUKKERI

Digitally signed by LAGAMA SHIVANAPPA HUKKERI
Date: 2025.12.31 17:59:36 +0530